ಶ್ರೀಃ

॥ ಜ್ಞಾನಾದೇವ ತು ಕೈವಲ್ಯಮ್ ॥

# ಶಂಕರವಚನಾಮೃತ

## ವೇದಾಂತಭಾರತೀ

**(ವೇದ-ವೇದಾಂತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ)**

**ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ-571 602**

**ಮೈಸೂರು ಜಿಲ್ಲೆ. ದೂ : 08223-262471**

## ನಿವೇದನೆ

ಸನಾತನ ಧರ್ಮೋದ್ಧಾರಕರಾಗಿ ಅವತರಿಸಿದ **ಜಗದ್ಗುರು ಶ್ರೀಶಂಕರಭಗವತ್ಪಾದರು** ಲೋಕಕ್ಕೆಲ್ಲ ಆತ್ಮಜ್ಞಾನದ ಬೆಳಕನ್ನು ನೀಡಿದವರು. ಅಜರಾಮರವಾದ ಅವರ ಸಂದೇಶ ಇಂದಿಗೂ, ಎಂದಿಗೂ, ಎಂದೆಂದಿಗೂ ನಮ್ಮ ಅಜ್ಞಾನವೆಂಬ ಕತ್ತಲನ್ನು ದೂರಮಾಡಿ ನಮಗೆ ಶ್ರೇಯೋಮಾರ್ಗವನ್ನು ತೋರುವ ನಂದಾದೀಪವಾಗಿದೆ ಎಂಬಲ್ಲಿ ಯಾವ ಸಂದೇಹವೂ ಇಲ್ಲ. ಅವರ ತತ್ತ್ವೋಪದೇಶವನ್ನು ಸಮಸ್ತರಿಗೂ ತಲುಪಿಸಲು ವೇದಾಂತಭಾರತೀ ಸಂಸ್ಥೆಯು ಕಾರ್ಯಪ್ರವೃತ್ತವಾಗಿದೆ. ಕಳೆದ ಆರು ವರ್ಷಗಳಿಂದ ನಾಡಿನಾದ್ಯಂತ **ಶಾಂಕರ ಸಂದೇಶ-ಶಾಂಕರ ಸರಸ್ವತೀ** ಮೊದಲಾದ ಅನೇಕ ಕಾರ್ಯಕ್ರಮಗಳನ್ನು

ಆಯೋಜಿಸುತ್ತ ಬರುತ್ತಿದೆ. ಸಮಸ್ತರೂ ಶ್ರೀ ಶಂಕರಭಗವತ್ಪಾದರ ತತ್ತ್ವೋಪದೇಶವನ್ನು ಅರಿತು ಜೀವನದಲ್ಲಿ ಅದನ್ನು ಅಳವಡಿಸಿಕೊಂಡು ಶ್ರೇಯೋವಂತರಾಗಲೆಂದು ಇದೀಗ **ಶಂಕರವಚನಾಮೃತ** ಎಂಬ ಕಿರುಹೊತ್ತಿಗೆಯನ್ನು ಮನೆಮನೆಗೆ ನೀಡುತ್ತಿದೆ. ಆಸ್ತಿಕರು ಇದನ್ನು ಓದಿ ಶ್ರೀ ಶಂಕರಭಗವತ್ಪಾದರ ಎಲ್ಲ ಕೃತಿಗಳನ್ನು ಅರಿತುಕೊಳ್ಳಲು ಉತ್ಸುಕರಾದರೆ ನಮ್ಮ ಪ್ರಯತ್ನ ಸಾರ್ಥಕವೆಂದು ಭಾವಿಸುತ್ತೇವೆ.

ಸಂಸ್ಥೆಯ ಮಹಾಸಂರಕ್ಷಕರಾದ ದಕ್ಷಿಣಾಮ್ನಾಯ ಶೃಂಗೇರಿ ಶ್ರೀಶಾರದಾಪೀಠಾಧೀಶ್ವರರಾದ **ಪರಮಪೂಜ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು** ಈ ಪುಸ್ತಕವನ್ನು ನೋಡಿ ಮಾರ್ಗದರ್ಶನ ಮಾಡಿ ಅನುಗ್ರಹಿಸಿದ್ದಾರೆ. ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಚರಣಕಮಲಗಳಲ್ಲಿ ಅನಂತ ಪ್ರಣಾಮಗಳನ್ನು ಸಮರ್ಪಿಸುತ್ತೇವೆ. ಸಂಸ್ಥೆಯ ಸಂರಕ್ಷಕರಾದ ಕೃಷ್ಣರಾಜನಗರದ ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧೀಶರಾದ **ಪರಮಪೂಜ್ಯ ಶ್ರೀ ಶ್ರೀ ಶಂಕರಭಾರತೀ ಮಹಾಸ್ವಾಮಿಗಳವರು** ಸಂಸ್ಥೆಯ ಎಲ್ಲ ಕಾರ್ಯಕಲಾಪಗಳಲ್ಲಿ ಹೆಜ್ಜೆ ಹೆಜ್ಜೆಗೂ ಮಾರ್ಗದರ್ಶನವನ್ನಿತ್ತು ಅನುಗ್ರಹಿಸುತ್ತಿದ್ದಾರೆ. ಪರಮಪೂಜ್ಯ ಶ್ರೀ ಶ್ರೀಗಳವರ ಪಾದಪದ್ಮಗಳಿಗೆ ಅನಂತ ನಮನಗಳು.

ಈ ಕಿರು ಗ್ರಂಥಕ್ಕೆ ಶ್ರೀ ಶಂಕರರ ಸೂಕ್ತಿಗಳನ್ನು ಆಯ್ದು ತಾತ್ಪರ್ಯವನ್ನು ನೀಡಿದ ಸಂಸ್ಥೆಯ ಹಿರಿಯ ಕಾರ್ಯಕರ್ತರಾದ ಹಾಗೂ ನಾಡಿನ ಗಣ್ಯ ವಿದ್ವಾಂಸರಾದ ಶ್ರೀ ಅನಂತಶರ್ಮಾ ಭುವನಗಿರಿಯವರಿಗೂ, ಶ್ರೀ ಜಿ. ಮಹಾಬಲೇಶ್ವರ ಭಟ್ಟರವರಿಗೂ, ಶ್ರೀ ಗಣೇಶ ಭಟ್ಟ ಹೋಬಳಿಯವರಿಗೂ ಹಾರ್ದಿಕ ಧನ್ಯವಾದಗಳು. ಕಿರುಹೊತ್ತಿಗೆಯ ಮುದ್ರಣಕ್ಕಾಗಿ ಆರ್ಥಿಕ ಸಹಕಾರವನ್ನು ನೀಡಿದವರಿಗೆ ಧನ್ಯವಾದಗಳು.

ಸುಂದರವಾಗಿ ಮುದ್ರಿಸಿದ ಸ್ಕ್ಯಾನ್ ಪ್ರಿಂಟ್‌ನ ಮಾಲೀಕರ ಮೇಲೆ ಶ್ರೀ ಶಂಕರರ ಕೃಪಾದೃಷ್ಟಿ ಇರಲೆಂದು ಪ್ರಾರ್ಥಿಸುತ್ತೇವೆ.

ಶ್ರೀ ವ್ಯಯ ಸಂ॥ದ ಪುಷ್ಯ ಪೂರ್ಣಿಮಾ
ತಾ : 3–1–2007

ಡಾ॥ ಶ್ರೀಧರ ಭಟ್ಟ ಐನಕೈ.
ನಿರ್ದೇಶಕರು, ವೇದಾಂತಭಾರತೀ

# ಶಂಕರ ವಚನಾಮೃತ

ಶ್ರೀ ಶಂಕರಭಗವತ್ಪಾದರು ಸುಮಾರು ಹದಿಮೂರು ನೂರು ವರ್ಷಗಳ ಹಿಂದೆ ಭಾರತೀಯದರ್ಶನಾಕಾಶದಲ್ಲಿ ಮೂಡಿದ ಒಂದು ಉಜ್ಜ್ವಲ ನಕ್ಷತ್ರ. ಅತಿಯಾದ ಕರ್ಮವಾದ, ಆಕ್ರಮಣಗೈಯುತ್ತಿರುವ ನೈರಾತ್ಮ್ಯವಾದಗಳಿಂದಾಗಿ ಭಾರತೀಯರ ಧಾರ್ಮಿಕಜೀವನ ಗೊಂದಲಮಯ-ವಾಗಿದ್ದಾಗ ಅವರಿಗೆ ಶ್ರೇಯೋಮಾರ್ಗವನ್ನು ಸಂಶಯಾತೀತವಾಗಿ ತೋರಿಸಿಕೊಟ್ಟವರು ಅವರು. ಉಪನಿಷತ್ತುಗಳ ಸಾರ್ವಕಾಲಿಕ ಉಪದೇಶವನ್ನು ತಮ್ಮ ಪ್ರಚಂಡ ಬೌದ್ಧಿಕ ಸಾಮರ್ಥ್ಯದಿಂದ ಒಂದು ಸಿದ್ಧಾಂತವನ್ನಾಗಿ ನೆಲೆಗೊಳಿಸಿದವರು. ಆಚಾರ್ಯರು ಯಾವುದೇ ಹೊಸ ಮತ ಅಥವಾ ಧರ್ಮವನ್ನು ಸ್ಥಾಪಿಸಲಿಲ್ಲ. ಸತ್ಯವನ್ನು ಕಾಣಬೇಕು, ಆ ಸತ್ಯದ ಬೆಳಕಿನಲ್ಲಿ ತಮ್ಮ ಜೀವನದ ಪರಮ ಗುರಿಯನ್ನು ನಿಶ್ಚೈಸಿಕೊಳ್ಳಬೇಕು ಎಂದು ಬಯಸುವ ಯಾವುದೇ ವ್ಯಕ್ತಿಗೂ ಪಥ್ಯವಾಗಬಹುದಾದ ಸಿದ್ಧಾಂತ ಅವರದು. ನಾವು ಯಾವುದೇ ಧರ್ಮವನ್ನು ಅನುಸರಿಸುತ್ತಿರಲಿ, ಯಾವುದೇ ಆಕಾರದಲ್ಲಿ ಭಗವಂತನನ್ನು ಆರಾಧಿಸುತ್ತಿರಲಿ ಆಚಾರ್ಯರ ಸಿದ್ಧಾಂತದ ಹಿನ್ನೆಲೆ ಅವುಗಳಿಗಿದ್ದಲ್ಲಿ ಅವು ನಮ್ಮನ್ನು ನಿಶ್ಚಯವಾಗಿ ಶ್ರೇಯೋಮಾರ್ಗಕ್ಕೆ ಕೊಂಡೊಯ್ಯಬಲ್ಲವು. ಮಾನವನು ತನ್ನ ಹಾಗೂ ತೋರುತ್ತಿರುವ ವಿಶ್ವದ ನೈಜಸ್ವರೂಪವನ್ನರಿತಲ್ಲಿ ಅವನು ಪ್ರಪಂಚವನ್ನು ನೋಡುವ ದೃಷ್ಟಿಕೋನವೇ ಬದಲಾದೀತು. ಹೃದಯಶುದ್ಧಿಯುಂಟಾದೀತು.

**ಉಪನಿಷತ್ತುಗಳ ಉಪದೇಶದಂತೆ ವಿಶ್ವವೆಲ್ಲ ಒಂದೇ ಒಂದು ಮಹಾಚೈತನ್ಯದಲ್ಲಿ ತೋರುವ ಹುಸಿತೋರಿಕೆ.** ಆ ಮಹಾಚೈತನ್ಯವನ್ನು ಬಿಟ್ಟರೆ ಇನ್ನೇನೂ ಇಲ್ಲ. ಎಲ್ಲವೂ ಒಂದೇ ಆಗಿರುವಾಗ ರಾಗದ್ವೇಷಗಳಿಗೆ ಎಡೆಯೇ ಇಲ್ಲ. ಹೀಗೆ ವ್ಯಕ್ತಿಶುದ್ಧಿಯ ಮೂಲಕ ರಾಷ್ಟ್ರಶುದ್ಧಿ, ಆ ಮೂಲಕ ರಾಷ್ಟ್ರಿಯ ಭಾವೈಕ್ಯ. ಇಂಥ ಮಹಾನ್ ಸಿದ್ಧಾಂತವನ್ನು ಲೋಕಕ್ಕೆ ನೀಡಿ ಅದರ ನಿರಂತರ ಪ್ರತಿಪಾದನೆಗಾಗಿ ಭಾರತದ ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಿ, ಭಾರತವು

ಏಕರಾಷ್ಟ್ರವೆಂಬ ಕಲ್ಪನೆಯನ್ನು ಬಲಪಡಿಸಿ, ತಮ್ಮ ಮೂವತ್ತೆರಡನೆಯ ವಯಸ್ಸಿನಲ್ಲಿ ಶ್ರೀ ಶಂಕರಭಗವತ್ಪಾದರು ಕೇದಾರದಲ್ಲಿ ಅದೃಶ್ಯರಾದರು. ಭಗವತ್ಪಾದರ ಜೀವಿತಾವಧಿ 32 ವರ್ಷಗಳು. ಈ ಸಾಂಕೇತಿಕ ಹಿನ್ನೆಲೆಯಲ್ಲಿ ಅವರ ಕೃತಿಗಳಿಂದ ಆಯ್ಕೆ ಮಾಡಿದ 32 ವಾಕ್ಯಗಳನ್ನು ಈ ಕಿರುಹೊತ್ತಿಗೆಯಲ್ಲಿ ಅಳವಡಿಸಿ ಆಸ್ತಿಕರ ಮುಂದೆ ಇರಿಸಲಾಗಿದೆ. ಆಚಾರ್ಯರ ಒಂದೊಂದು ಮಾತೂ ಅನುಪಮವಾದುದು. ಆದ್ದರಿಂದ ಅವರ ವಚನ ಕೇವಲ ವಚನವಾಗಿರದೇ ವಚನಾಮೃತವೇ ಆಗಿದೆ.

ಅವರ ಕ್ಷರಶರೀರ ಅನೇಕ ವರ್ಷಗಳ ಹಿಂದೆಯೇ ನಮ್ಮಿಂದ ಕಣ್ಮರೆಯಾದರೂ ಅಕ್ಷರರೂಪ ಶರೀರದಿಂದ ಅವರಿನ್ನೂ ನಮ್ಮ ಮುಂದೆ ಇದ್ದಾರೆ. ಅವರ ಈ ಅಜರಾಮರ ಸಂದೇಶವನ್ನು ಓದಿ ಮನನ ಮಾಡಿಕೊಂಡಲ್ಲಿ ಆತ್ಮ ಹಾಗೂ ಪ್ರಪಂಚಗಳ ಬಗ್ಗೆ ಸ್ಪಷ್ಟ ಕಲ್ಪನೆಯುಂಟಾಗಿ ವ್ಯಕ್ತಿಯ ಮನಸ್ಸು ಶುದ್ಧವಾಗುತ್ತದೆ. ವ್ಯಕ್ತಿಶುದ್ಧಿಯಿಂದ ಸಮಾಜಶುದ್ಧಿ, ಸುಖೀಸಮಾಜದ ನಿರ್ಮಾಣ. ಆಚಾರ್ಯರ ವಚನಾಮೃತವನ್ನು ಸವಿದು ನಾವು ಶ್ರೇಯಸ್ಸಿಗೆ ಪಾತ್ರರಾಗೋಣ.

ಅವರ ಈ ಉಪದೇಶರತ್ನಗಳು ಸದಾ ನಮ್ಮ ಕಣ್ಣೆದುರಿಗಿರಲಿ.

**1. ಅಯಂ ತು ಏಕತ್ವದರ್ಶೀ ನ ಬಿಭೇತಿ ಕುತಶ್ಚನ । [ಬೃ.ಉ.ಭಾ 4–4–15]**

ಅಭೇದವನ್ನೇ ನೋಡುವವನು ಯಾರಿಗೂ ಅಂಜುವುದಿಲ್ಲ.

ತನಗಿಂತ ಹೊರತಾದ ಇನ್ನೊಂದಿದೆ ಎಂದು ತಿಳಿಯುವುದರಿಂದ ಭಯವುಂಟಾಗುತ್ತದೆ. ಆ ಇನ್ನೊಂದು ನಿಜವಾಗಿ ಇಲ್ಲ. ಹೀಗಿರುವಾಗ ಯಾರು ಯಾರಿಗೆ ಅಂಜಬೇಕು? ಆದ್ದರಿಂದ ಅಭೇದದೃಷ್ಟಿಯಲ್ಲಿ ಭಯಕ್ಕೆ ಎಡೆಯೇ ಇಲ್ಲ.

**2. ದೇಹಾದಿ–ಆತ್ಮಬುದ್ಧಿಃ ಅವಿದ್ವಾನ್ ರಾಗದ್ವೇಷಾದಿ–ಪ್ರಯುಕ್ತೋ ಧರ್ಮಾಧರ್ಮಾದಿ–ಅನುಷ್ಠಾನಕೃತ್ । [ಗೀ.ಭಾ. 13–2]**

ದೇಹಾದಿಗಳನ್ನೇ ಆತ್ಮವೆಂದು ತಿಳಿಯುವ ಅಜ್ಞಾನಿಯು ರಾಗದ್ವೇಷಾದಿಗಳಿಂದ ಪ್ರೇರಿತನಾಗಿ ಪಾಪಪುಣ್ಯ ಕರ್ಮಗಳನ್ನು ಮಾಡುತ್ತಾನೆ.

ಮನುಷ್ಯನು ಮಾಡುವ ಪುಣ್ಯಪಾಪ–ಕರ್ಮಗಳಿಗೆ ರಾಗದ್ವೇಷಗಳೇ ಮೂಲವಾಗಿವೆ. ರಾಗದ್ವೇಷಗಳಿಗೆ ಮೂಲವಾಗಿರುವುದು ಅಜ್ಞಾನ. ಅಜ್ಞಾನದಿಂದ ದೇಹಾತ್ಮಬುದ್ಧಿ. ದೇಹಾತ್ಮಬುದ್ಧಿಯು ತೊಲಗಿದಾಗ ಮನುಷ್ಯನು ಪುಣ್ಯಕರ್ಮವನ್ನೂ, ಪಾಪಕರ್ಮವನ್ನೂ ಸಮನಾಗಿ ತ್ಯಜಿಸಿಬಿಡುವನು.

**3. ತಥಾ ಚ ಸರ್ವಪ್ರಾಣಿನಾಂ ಶೋಕಮೋಹಾದಿ ದೋಷಾವಿಷ್ಟ–ಚೇತಸಾಂ ಸ್ವಭಾವತ ಏವ ಸ್ವಧರ್ಮಪರಿತ್ಯಾಗಃ ಪ್ರತಿಷಿದ್ಧ ಸೇವಾ ಚ ಸ್ಯಾತ್ । [ಗೀ.ಭಾ. 2–ಪೀಠಿಕೆ]**

ಯಾರ ಮನಸ್ಸಿನಲ್ಲಿ ಶೋಕಮೋಹ ಮುಂತಾದ ದೋಷಗಳು ತುಂಬಿರುತ್ತವೊ ಅವರಿಗೆ ಸ್ವಧರ್ಮವನ್ನು ಬಿಡುವುದೂ, ನಿಷಿದ್ಧ ಕೆಲಸಗಳನ್ನು ಮಾಡುವುದೂ ಸಹಜವೇ ಆಗಿರುತ್ತದೆ.

ವ್ಯಕ್ತಿಯು ದುಃಖಕ್ಕೆ ಒಳಗಾದಾಗ ಮತ್ತು ಮೋಹವನ್ನು ಹೊಂದಿದಾಗ ತನ್ನ ಕರ್ತವ್ಯವನ್ನು ಮರೆತು ಮಾಡಬಾರದ್ದನ್ನು ಮಾಡುತ್ತಾನೆ. ಇದರಿಂದ ಜೀವನವು ವ್ಯರ್ಥವಾಗುತ್ತದೆ. ಅದಕ್ಕಾಗಿ ಪ್ರತಿಯೊಬ್ಬನೂ ಶೋಕ–ಮೋಹಗಳಿಗೆ ಒಳಗಾಗದೇ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕು.

**4. ಪ್ರಾಣಿನಾಂ ಸುಖಪ್ರಾಪ್ತಯೇ ಧರ್ಮೋ ವಿಧೀಯತೇ । ದುಃಖಪರಿಹಾರಾಯ ಚ ಅಧರ್ಮ ಪ್ರತಿಷಿಧ್ಯತೇ । [ಸೂ.ಭಾ. 1–3–30]**

ಪ್ರಾಣಿಗಳಿಗೆ ಸುಖಸಿಗಲೆಂದು ಧರ್ಮವನ್ನು ವಿಧಿಸಲಾಗಿದೆ. ದುಃಖ ಬರದಿರಲೆಂದು ಅಧರ್ಮವನ್ನು ನಿಷೇಧಿಸಲಾಗಿದೆ.

ಇಹಪರಗಳಲ್ಲಿ ಸುಖಕ್ಕೆ ಸಾಧನವಾಗಿರುವುದು ಮತ್ತು ನಮ್ಮ ಜೀವನಕ್ರಮಕ್ಕೆ ವ್ಯವಸ್ಥಿತ ಚೌಕಟ್ಟನ್ನು ಒದಗಿಸಿಕೊಡುವುದು ಧರ್ಮ.

ನಾವು ಶಾಸ್ತ್ರದಲ್ಲಿ ತಿಳಿಸಿದ ಸತ್ಯ ಹೇಳುವುದೇ ಮೊದಲಾದ ಧರ್ಮಗಳನ್ನು ಆಚರಿಸಿದಾಗ, ಸುಖವು ಸಿಗುತ್ತದೆ. ಶಾಸ್ತ್ರದಲ್ಲಿ ನಿಷೇಧಿಸಿದ (ಮಾಡಬಾರದ್ದೆಂದು ತಿಳಿಸಿದ) ಅಧರ್ಮಗಳನ್ನು ಬಿಟ್ಟಲ್ಲಿ ಕಷ್ಟವು ಬರುವುದು ತಪ್ಪುತ್ತದೆ. ಆದ್ದರಿಂದ ಶ್ರುತಿಯು "ಧರ್ಮಂ ಚರ", "ಧರ್ಮಾನ್ನ ಪ್ರಮದಿತವ್ಯಮ್" ಎಂದು ಉಪದೇಶಿಸುತ್ತದೆ.

**5. ಗುಣಾಧಿಕೈರ್ಹಿ ಗೃಹೀತಃ–ಅನುಷ್ಠೀಯಮಾನಶ್ಚ ಧರ್ಮಃ ಪ್ರಚಯಂ ಗಮಿಷ್ಯತಿ ಇತಿ । [ಗೀ.ಭಾ. ಪೀಠಿಕೆ]**

ಗುಣವಂತರು ಧರ್ಮವನ್ನರಿತು ಆಚರಿಸಿದರೆ ಆ ಧರ್ಮವು ಎಲ್ಲೆಡೆ ಪಸರಿಸುತ್ತದೆ.

ಉಪದೇಶಗಳನ್ನು ನೀಡುವಾಗ ಅರ್ಹರಾದವರಿಗೇ ನೀಡಬೇಕು. ಅರ್ಹರಾದವರು ಉಪದೇಶಗಳನ್ನು ತಿಳಿದುಕೊಂಡು ಜೀವನದಲ್ಲಿ ಆಚರಿಸಿದಾಗ ಅದನ್ನು ಬೇರೆಯವರೂ ಅನುಸರಿಸುತ್ತಾರೆ. ಅನರ್ಹರಾದವರಿಗೆ ನೀಡಿದ ಉಪದೇಶವು ವ್ಯರ್ಥವಾಗುವುದನ್ನು ಕಾಣುತ್ತೇವೆ. ಆದ್ದರಿಂದ ಧರ್ಮೋಪದೇಶವನ್ನು ಗುಣವಂತರಿಗೇ ನೀಡಬೇಕು.

**6. ಪ್ರತ್ಯಕ್ಷಾ ಚ ವಿದ್ವತ್ಸಂಯೋಗೇ ಪ್ರಜ್ಞಾವೃದ್ಧಿಃ । [ಬೃ.ಉ.ಭಾ. 3–1–1]**

ವಿದ್ವಾಂಸರ ಸಹವಾಸದಲ್ಲಿದ್ದರೆ ಬುದ್ಧಿ ಬೆಳೆಯುವುದೆಂಬುದು ಪ್ರತ್ಯಕ್ಷಸಿದ್ಧ.

ಉತ್ತಮ ವಿದ್ವಾಂಸರ ಬಳಿಸೇರಿದ ಸಾಮಾನ್ಯ ವಿದ್ಯಾರ್ಥಿಯೂ ಬುದ್ಧಿವಂತನಾಗುವುದು ಲೋಕಾನುಭವದಲ್ಲಿದೆ. ಇಂದಿಗೂ ನಾವು ಇದನ್ನು ಪ್ರತ್ಯಕ್ಷವಾಗಿ ಕಾಣುತ್ತೇವೆ. ಬೋಪದೇವನೆಂಬ ಮಂದ ವಿದ್ಯಾರ್ಥಿಯು ಉತ್ತಮ ವಿದ್ವಾಂಸರಾದ ಗುರುಗಳನ್ನು ಸೇರಿ ಬುದ್ಧಿವಂತನಾಗಿ ಮುಂದೆ ಉತ್ತಮ ವ್ಯಾಕರಣ ಪಂಡಿತನಾದದ್ದು ಇತಿಹಾಸದಿಂದ ತಿಳಿದುಬರುತ್ತದೆ.

**7. ನ ಚ ವಿಜ್ಞಾನಾತ್ಮಾ ಪರಮಾತ್ಮನೋ ವಸ್ತ್ವಂತರಮ್ । [ಬೃ.ಉ.ಭಾ. 2–3–6]**

ಜೀವಾತ್ಮನು ಪರಮಾತ್ಮನಿಗಿಂತ ಭಿನ್ನನಾದ ಇನ್ನೊಂದು ವಸ್ತುವಲ್ಲ.

ನೀರಿನ ಅಲೆಯು ನೀರಿಗಿಂತ ಹೇಗೆ ಬೇರೆಯಲ್ಲವೋ ಬಂಗಾರದ ಉಂಗುರವು ಬಂಗಾರಕ್ಕಿಂತ ಹೇಗೆ ಬೇರೆಯಲ್ಲವೋ ಘಟಾಕಾಶವು ಮಹಾಕಾಶಕ್ಕಿಂತ ಹೇಗೆ ಬೇರೆಯಲ್ಲವೋ ಹಾಗೆ ಜೀವಾತ್ಮನು ಪರಮಾತ್ಮನಿಗಿಂತ ಬೇರೆಯಲ್ಲ. **"ಜೀವೋ ಬ್ರಹ್ಮೈವ ನಾಪರಃ".**

**8. ಬ್ರಹ್ಮೈವ ಏಕಂ ಪರಮಾರ್ಥಸತ್ಯಮ್ ಇತಿ ವೇದಾನುಶಾಸನಮ್।**
**[ಮುಂ.ಉ.ಭಾ. 2–2–11]**

ಬ್ರಹ್ಮವೊಂದೇ ಪರಮಾರ್ಥಸತ್ಯವೆಂದು ವೇದದ ಉಪದೇಶವಾಗಿದೆ.

ಸತ್ಯಕ್ಕೆ ಮೂರು ಮುಖಗಳು, ಪ್ರಾತಿಭಾಸಿಕ, ವ್ಯಾವಹಾರಿಕ, ಪಾರಮಾರ್ಥಿಕ ಎಂದು. ಕಪ್ಪೆಚಿಪ್ಪಿನಲ್ಲಿ ತೋರುವ ಬೆಳ್ಳಿಯು ಪ್ರಾತಿಭಾಸಿಕವಾದುದು. ಹಾಗೆಯೇ ಕನಸು ಕೂಡಾ. ಇವೆಲ್ಲ ಕಾಣುತ್ತಿರುವಷ್ಟು ಕಾಲ ಮಾತ್ರ ಸತ್ಯ. ಮರುಕ್ಷಣದಲ್ಲಿ ಇವು ಸತ್ಯವಲ್ಲವೆಂದು ನೋಡುಗನ ಅನುಭವಕ್ಕೆ ಬರುತ್ತದೆ. ನಮ್ಮ ಕಣ್ಣಿಗೆ ತೋರುತ್ತಿರುವ ಈ ಪ್ರಪಂಚವು ವ್ಯಾವಹಾರಿಕ ಸತ್ಯ. ಇದು ಕನಸಿನಷ್ಟು ಅಸತ್ಯವಾಗದಿದ್ದರೂ ಪಾರಮಾರ್ಥಿಕ– ಜ್ಞಾನದಿಂದ ಇದೂ ಕೇವಲ ಹುಸಿತೋರಿಕೆಯೆಂದು ಅನುಭವಕ್ಕೆ ಬರುತ್ತದೆಯೆಂದು ಉಪನಿಷತ್ತುಗಳು ಸಾರುತ್ತವೆ. ಬ್ರಹ್ಮವಸ್ತು ಮಾತ್ರ ದೇಶತಃ ಕಾಲತಃ ಸ್ವರೂಪತಃ ಎಂದೂ ಬದಲಾವಣೆ ಹೊಂದದೇ ಏಕರೀತಿಯಾಗಿರುವುದರಿಂದ ಅದು ಮಾತ್ರ ಪರಮಾರ್ಥಸತ್ಯ. ತದಿತರವಾದುದು ಮಿಥ್ಯಾ. **"ಬ್ರಹ್ಮ ಸತ್ಯಂ ಜಗನ್ಮಿಥ್ಯಾ"**

**9. ಅಮೇಧಸೋ ಹಿ ಶ್ರೀಃ ಅನರ್ಥಾಯೈವ । [ತೈ.ಉ.ಭಾ.1.4.3]**

ಬುದ್ಧಿಯಿಲ್ಲದವನಿಗೆ ದೊರೆತ ಐಶ್ವರ್ಯ ಅನರ್ಥಕಾರಿಯೇ ಆಗುತ್ತದೆ.

ಅಂಗರಾಜನ ಮಗ ವೇನ. ಸ್ವಭಾವತಃ ಬುದ್ಧಿಗೇಡಿ; ಸಾಲದ್ದಕ್ಕೆ ರಾಜಕುಮಾರ. ಪ್ರಾಯ ಬಂದಾಗ ಅಂಗದೇಶಕ್ಕೆ ರಾಜನೂ ಆದ. ಯೌವನ, ಧನಸಂಪತ್ತು, ಪ್ರಭುತ್ವ, ಅವಿವೇಕ ಎಲ್ಲವೂ ಸೇರಿದ್ದರಿಂದ ತನಗೆ ಯಾರೂ ಸರಿಯಿಲ್ಲವೆಂದು ಭಾವಿಸಿ ತನ್ನನ್ನೇ ದೇವರೆಂದು ಪೂಜಿಸಬೇಕೆಂದು ಆಜ್ಞೆ ಮಾಡಿದ. ಇದಕ್ಕೆ ಒಪ್ಪದ ಸಜ್ಜನರನ್ನು ನಿರ್ದಾಕ್ಷಿಣ್ಯವಾಗಿ ಹಿಂಸಿಸತೊಡಗಿದ. ಇದರ ಪರಿಣಾಮದಿಂದ ರಾಜ್ಯದಲ್ಲೆಲ್ಲ ಹಾಹಾಕಾರ ಉಂಟಾಯಿತು. ಎಲ್ಲೆಲ್ಲೂ ಕಲಹ, ಅತೃಪ್ತಿಯಿಂದ ಪ್ರಜೆಗಳು ದಾರಿತಪ್ಪಿದರು. ಭೂಮಿ ಬಂಜರಾಯಿತು. ಕೊನೆಗೆ ಮುನಿಸಿಕೊಂಡು ವೇನನ ಪ್ರಜೆಗಳೇ ವೇನನನ್ನು ಸಾಯಿಸಿದರು. ಇದಲ್ಲವೇ ಅನರ್ಥ!

**10. ತಸ್ಮಾತ್ ಕೇವಲಾದೇವ ಜ್ಞಾನಾತ್ ಮೋಕ್ಷಃ ಇತ್ಯೇಷಃ ಅರ್ಥೋ ನಿಶ್ಚಿತಃ ಗೀತಾಸು ಸರ್ವೋಪನಿಷತ್ಸು ಚ । [ಗೀಭಾ.. 3–ಪೀಠಿಕೆ]**

ಕೇವಲ ಜ್ಞಾನವೊಂದರಿಂದಲೇ ಮೋಕ್ಷ ಸಿಗುವುದೆಂಬುದು ಗೀತೆಯಲ್ಲಿಯೂ ಎಲ್ಲ ಉಪನಿಷತ್ತುಗಳಲ್ಲಿಯೂ ನಿರ್ಣೀತವಾಗಿದೆ.

ಕರ್ಮ ಮತ್ತು ಭಕ್ತಿ ಚಿತ್ತಶುದ್ಧಿಗೆ ಕಾರಣವಾಗುವುವು. ಇವುಗಳು ಮೋಕ್ಷಕ್ಕೆ ಪರಂಪರೆಯಿಂದ ಕಾರಣಗಳು. ಆತ್ಮಜ್ಞಾನವೊಂದೇ ಮೋಕ್ಷಕ್ಕೆ ನೇರ ಕಾರಣ.

**11. ನ ಚ ಅಜ್ಞಾನವ್ಯತಿರೇಕೇಣ ಮೋಕ್ಷಸ್ಯ ವ್ಯವಧಾನಾಂತರಂ ಕಲ್ಪಯಿತುಂ ಶಕ್ಯಮ್ । [ಬೃ.ಉ.ಭಾ 3–3–1]**

ಅಜ್ಞಾನವೊಂದನ್ನು ಬಿಟ್ಟು ಮೋಕ್ಷಕ್ಕೆ ಇನ್ನೊಂದು ತಡೆಯಿದೆಯೆಂದು ಕಲ್ಪಿಸಲು ಸಾಧ್ಯವಿಲ್ಲ.

ಪ್ರತಿಯೊಬ್ಬನಿಗೂ ಮೋಕ್ಷವನ್ನು (ಪರಮಾನಂದವನ್ನು) ಪಡೆಯಬೇಕೆಂಬ ಆಸೆ ಇದ್ದೇ ಇರುತ್ತದೆ. ಸ್ವಸ್ವರೂಪದ ಅವಗತಿಯೇ ಮೋಕ್ಷ. ಇದಕ್ಕೆ ಅಡ್ಡಿಯಾದುದು ನಮ್ಮ ಜನ್ಮ ಜನ್ಮಾಂತರದ ಅಜ್ಞಾನ. ಸಣ್ಣದಾದ ಒಂದು ಮೋಡವು ಪ್ರಪಂಚವನ್ನೇ ಬೆಳಗುವ ಸೂರ್ಯನನ್ನು

ಮರೆಮಾಚುವಂತೆ ಅಜ್ಞಾನವು ನಮ್ಮ ಸ್ವರೂಪವನ್ನು ಮರೆಮಾಚುತ್ತದೆ. ಇಂತಹ ಅಜ್ಞಾನವನ್ನು ಕಳೆದುಕೊಳ್ಳುವ ಉಪಾಯವೆಂದರೆ ಗುರೂಪದೇಶ ಮತ್ತು ವೇದಾಂತಶಾಸ್ತ್ರಗ್ರಂಥಗಳ ನಿರಂತರ ಅಧ್ಯಯನ ಹಾಗೂ ಅಧ್ಯಾತ್ಮ ಸಾಧನೆ.

**12. ಸರ್ವತ್ರ ಹಿ ಶಾಸ್ತ್ರಪ್ರಾಪಿತಾ ಏವ ಧರ್ಮಾಃ ಉಪಾಸ್ಯಾಃ ನ ವಿದ್ಯಮಾನಾ ಅಪಿ ಅಶಾಸ್ತ್ರೀಯಾಃ । [ಛಾಂ.ಉ.ಭಾ. 2.2.1]**

ಎಲ್ಲ ಸಂದರ್ಭಗಳಲ್ಲೂ ಶಾಸ್ತ್ರಗಳಿಂದ ತಿಳಿಸಲ್ಪಡುವವುಗಳೇ ಉಪಾಸನೆಗೆ ಯೋಗ್ಯವಾದವುಗಳು ಹೊರತು ಅಶಾಸ್ತ್ರೀಯವಾದವುಗಳಲ್ಲ.

ಕಣ್ಣಿಗೆ ಕಾಣದ ವಿಷಯಗಳಲ್ಲಿ ನಮಗೆ ಶಾಸ್ತ್ರಗಳೇ ಪ್ರಮಾಣ. ಏಕೆಂದರೆ ನಮ್ಮ ಮಂದದೃಷ್ಟಿಯ ಕಣ್ಣಿಗೆ ಕಾಣದ ಎಷ್ಟೋ ಸೂಕ್ಷ್ಮ ವಿಷಯಗಳನ್ನು ಮಂತ್ರದ್ರಷ್ಟಾರರಾದ ಋಷಿಮುನಿಗಳು ತಮ್ಮ ಅಂತಃಶಕ್ತಿಯಿಂದ ಕಂಡುಕೊಂಡಿದ್ದಾರೆ. ಆದ್ದರಿಂದ ದೇವರು, ಉಪಾಸನೆ ಮುಂತಾದ ವಿಷಯಗಳಲ್ಲಿ ಶಾಸ್ತ್ರವೇ ಪ್ರಮಾಣ.

**13. ದುರ್ಲಭಂ ತ್ರಯಮೇವೈತತ್ ದೈವಾನುಗ್ರಹಹೇತುಕಮ್।**
**ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ ॥ [ ವಿ.ಚೂ. 3]**

ಮನುಷ್ಯಜನ್ಮ, ಮೋಕ್ಷ ಬೇಕೆಂಬಾಸೆ, ಮಹಾಪುರುಷರ ಸಂಗಮ ಈ ಮೂರೂ ಅತ್ಯಂತ ದುರ್ಲಭವಾದವುಗಳು. ದೈವಾನುಗ್ರಹದಿಂದಲೇ ಇವು ದೊರಕುತ್ತವೆ.

ಮನುಷ್ಯಜನ್ಮವೇ ದುರ್ಲಭವಾದುದು "ಜಂತೂನಾಂ ನರಜನ್ಮದುರ್ಲಭಂ"–ಏನೋ ಭಾಗ್ಯವಶಾತ್ ಮನುಷ್ಯಜನ್ಮ ಬಂದರೂ ಮೋಕ್ಷ ಪಡೆಯಬೇಕೆಂಬಾಸೆ ಬರುವುದು ಇನ್ನೂ ದುರ್ಲಭ. ಪುಣ್ಯವಶಾತ್ ಮೋಕ್ಷೇಚ್ಛೆ ಉಂಟಾದರೂ ಅದಕ್ಕೆ ಮಾರ್ಗದರ್ಶನ

ಮಾಡಬಲ್ಲ ಮಹಾಪುರುಷರ ಸಂಗಮವಂತೂ ಅತ್ಯಂತ ದುರ್ಲಭ. ಪೂರ್ಣ ದೈವಾನುಗ್ರಹವಿದ್ದರೆ ಮಾತ್ರ ಈ ಮೂರು ಸಿಗುವುವು.

**14. ಇತಃ ಕೋಽನ್ವಸ್ತಿ ಮೂಢಾತ್ಮಾ ಯಸ್ತು ಸ್ವಾರ್ಥೇ ಪ್ರಮಾದ್ಯತಿ ।**
**ದುರ್ಲಭಂ ಮಾನುಷಂ ದೇಹಂ ಪ್ರಾಪ್ಯ ತತ್ರಾಪಿ ಪೌರುಷಮ್ ॥ [ವಿ.ಚೂ. 5]**

ಮನುಷ್ಯಜನ್ಮವನ್ನು ಪಡೆದೂ ತನ್ನ ಹಿತವನ್ನು ಸಾಧಿಸಿಕೊಳ್ಳಲು ಪ್ರಯತ್ನಿಸದಿದ್ದರೆ ಅವನಂಥ ಮೂಢರು ಇನ್ನಾರು?

ಪಶುಪಕ್ಷಿಗಳ ದೇಹಕ್ಕೆ ಹೋಲಿಸಿದರೆ ಮನುಷ್ಯದೇಹದಲ್ಲಿ ತನ್ನ ಹಿತವನ್ನು ಸಾಧಿಸಿಕೊಳ್ಳಲು ಅನುಕೂಲಕರವಾದ ಎಲ್ಲ ವ್ಯವಸ್ಥೆಯೂ ಇದೆ. ತಿರ್ಯಕ್‌ಜಂತುಗಳಿಗೆ ಇಲ್ಲದೇ ಇರುವ ಧರ್ಮಾಧರ್ಮಗಳನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವಿದೆ. ಅವುಗಳಿಗೆ ನಾಳಿನ ಅರಿವಿಲ್ಲ. ಜ್ಞಾನಾಭಿಲಾಷೆ ಇಲ್ಲ. ಮನುಷ್ಯನಿಗೆ ಜ್ಞಾನಸಂಗ್ರಹದ ಜೊತೆಗೆ ಸಾತ್ತ್ವಿಕ ಗುಣಗಳನ್ನು ಮೈಗೂಡಿಸಿಕೊಳ್ಳಲು ಸಾಕಷ್ಟು ಅನುಕೂಲಗಳಿವೆ. ಆದ್ದರಿಂದ ಮನುಷ್ಯದೇಹ ಬಂದಾಗ ತನ್ನ ಹಿತವನ್ನು (ಉದ್ಧಾರ) ಸಾಧಿಸಿಕೊಳ್ಳಬೇಕು.

**15. ಋಣಮೋಚನಕರ್ತಾರಃ ಪಿತುಃ ಸಂತಿ ಸುತಾದಯಃ ।**
**ಬಂಧಮೋಚನಕರ್ತಾ ತು ಸ್ವಸ್ಮಾದನ್ಯೋ ನ ಕಶ್ಚನ ॥ [ವಿ.ಚೂ. 53]**

ತಾನು ಮಾಡಿದ ಸಾಲವನ್ನು ತೀರಿಸಲು ಮಕ್ಕಳು ಮುಂತಾದವರಾದರೂ ಇರುತ್ತಾರೆ. ಸಂಸಾರ ಬಂಧನವನ್ನು ಮಾತ್ರ ತಾನೇ ಬಿಡಿಸಿಕೊಳ್ಳಬೇಕು. ಮತ್ತೆ ಯಾರೂ ಬಿಡಿಸಲಾರರು.

ಬಂಧನಕ್ಕೊಳಗಾದವನೇ ತನ್ನನ್ನು ತಾನು ಬಿಡಿಸಿಕೊಳ್ಳುವ ಮನಸ್ಸು ಮಾಡಬೇಕು. ರೋಗಬಂದವನೇ ಔಷಧ ಸೇವಿಸಿ ರೋಗ ವಾಸಿಮಾಡಿಕೊಳ್ಳಬೇಕಲ್ಲದೇ ಬೇರಾರೋ ಔಷಧ ಸೇವಿಸಿ ಇನ್ನಾರಿಗೋ ರೋಗ ವಾಸಿಯಾಗುವುದು ಎಂಬುದಿಲ್ಲ.

**16. ಗೇಯಂ ಗೀತಾನಾಮಸಹಸ್ರಂ ಧ್ಯೇಯಂ ಶ್ರೀಪತಿರೂಪಮಜಸ್ರಮ್।
ನೇಯಂ ಸಜ್ಜನಸಂಗೇ ಚಿತ್ತಂ ದೇಯಂ ದೀನಜನಾಯ ಚ ವಿತ್ತಮ್॥**
**[ಮೋಹಮುದ್ಗರ.27]**

ಬಡವರಿಗೆ ದಾನ ಮಾಡಬೇಕು.

ಯಾರಿಗೆ ಅವಶ್ಯಕತೆ ಇದೆಯೋ ಅವರಿಗೆ ದಾನ ಮಾಡಬೇಕು. ಬಡವನಿಗೆ ಮಾಡಿದ ದಾನ ಸಾರ್ಥಕವಾಗುವುದು. ಕೇರಳದ ರಾಜನಾದ ರಾಜಶೇಖರನು ಬಾಲಶಂಕರರ ಪ್ರತಿಭೆಗೆ ಮೆಚ್ಚಿ ಅಪಾರ ಸಂಪತ್ತನ್ನು ಕಾಣಿಕೆಯಾಗಿ ಸಮರ್ಪಿಸಿದನು. ಆಗ ಶಂಕರರು ಅದನ್ನು ತಾವು ಸ್ವೀಕರಿಸದೇ "ನಿನ್ನ ರಾಜ್ಯದಲ್ಲಿರುವ ಬಡವರಿಗೆ ಹಂಚು" ಎಂದು ಬಡವರಿಗೆ ಹಂಚಿಸಿದರು.

**17. ನ ಹಿ ಲೋಕೇ ವಿತ್ತಲಾಭಃ ಕಸ್ಯಚಿತ್ ತೃಪ್ತಿಕರೋ ದೃಷ್ಟಃ ।**
**[ಕಠ.ಉ.ಭಾ. 1–27]**

ಧನಲಾಭವು ಯಾರಿಗಾದರೂ ತೃಪ್ತಿಯನ್ನು ಉಂಟುಮಾಡುತ್ತದೆ ಎಂಬುದು ಲೋಕದಲ್ಲೆಲ್ಲೂ ಕಂಡುಬಂದಿಲ್ಲ.

ದುಡ್ಡಿನಿಂದ ಅಷ್ಟೊ ಇಷ್ಟೊ ತಾತ್ಕಾಲಿಕ ತೃಪ್ತಿ ಸಿಗುತ್ತದೆಯಾದರೂ ಜೊತೆಜೊತೆಗೆ ದುಃಖವೂ ಸೇರಿಕೊಂಡೇ ಇರುತ್ತದೆ. ದುಡ್ಡು ಕೈಸೇರಿದಾಗ ಆ ಮೊತ್ತಕ್ಕಿಂತ ದೊಡ್ಡಮೊತ್ತವನ್ನು ಸಂಪಾದಿಸುವುದು ಹೇಗೆಂದು ದಿನವಿಡೀ ಯೋಚನೆ ಮಾಡುವುದು ಲೋಕದ ಅನುಭವ. ಆದ್ದರಿಂದ "ನ ವಿತ್ತೇನ ತರ್ಪಣೀಯೋ ಮನುಷ್ಯಃ" ಎಂಬಂತೆ ದುಡ್ಡಿನಿಂದ ಸಿಗುವ ತೃಪ್ತಿಯು ಆತ್ಯಂತಿಕವಾದುದಲ್ಲ. "ಪುತ್ರಾದಪಿ ಧನಭಾಜಾಂ ಭೀತಿಃ" ಎಂಬ ಮಾತನ್ನೂ ನಾವು ಮರೆಯುವಂತಿಲ್ಲ.

**18. ನ ಹಿ ರಾತ್ರೌ ಕೂಪೇ ಕಂಟಕೇ ವಾ ಪತಿತಃ ಉದಿತೇಽಪಿ ಸವಿತರಿ ಪತತಿ ತಸ್ಮಿನ್ನೇವ ।        [ಛಾಂ.ಉ.ಭಾ. 2.23.1]**

ರಾತ್ರಿಯಲ್ಲಿ ಬಾವಿಯಲ್ಲೋ ಮುಳ್ಳಿನ ಮೇಲೆಯೋ ಬಿದ್ದವನು ಹಗಲಿನಲ್ಲಿಯೂ ಅದರಲ್ಲಿ ಬೀಳುವುದಿಲ್ಲ.

ಮನುಷ್ಯನು ನಡೆಯುವಾಗ ಹೆಜ್ಜೆ ಇಡುವ ಜಾಗವು ಕಾಣದೆಯೋ, ಪ್ರಮಾದದಿಂದಲೋ ಎಡವುತ್ತಾನೆ. ಆದರೆ ಹೆಜ್ಜೆ ಇಡುವ ಜಾಗವು ಸ್ಪಷ್ಟವಾಗಿ ಗೋಚರಿಸಿದ ಮೇಲೂ ಎಡವಲಾರ. ಹಾಗೆಯೇ ತಿಳುವಳಿಕೆ ಇಲ್ಲದೇ ಇರುವಾಗ ಮಾಡಿದ ತಪ್ಪನ್ನೇ ತಿಳುವಳಿಕೆ ಬಂದಮೇಲೂ ಮಾಡುವುದಿಲ್ಲ; ಮಾಡಬಾರದು.

**19. ಸರ್ವವೇದಾಂತೇಷು ಚ ಪ್ರತ್ಯಗಾತ್ಮಾ ವೇದ್ಯತಯೈವ ಪ್ರದರ್ಶ್ಯತೇ ಅಹಮಿತಿ, ನ ಬಹಿರ್ವೇದ್ಯತಯಾ ಶಬ್ದಾದಿವತ್ ಪ್ರದರ್ಶ್ಯತೇಽಸೌ ಬ್ರಹ್ಮೇತಿ । [ಬೃ.ಉ.ಭಾ. 2–1–20]**

ಎಲ್ಲ ಉಪನಿಷತ್ತುಗಳಲ್ಲಿಯೂ ಪ್ರತ್ಯಗಾತ್ಮನಾಗಿಯೇ ಬ್ರಹ್ಮವಸ್ತು ತಿಳಿಸಲ್ಪಡುತ್ತದೆ. ಶಬ್ದಾದಿಗಳಂತೆ ಹೊರಗಿನ ತಿಳಿಯುವ ವಸ್ತುವಾಗಿ ಅಲ್ಲ.

ಈ ಪ್ರಪಂಚದಲ್ಲಿ ದೃಕ್ ಮತ್ತು ದೃಶ್ಯ ಎಂದು ಎರಡು ತರಹದ ವಸ್ತುಗಳಿವೆ. ನೋಡಲ್ಪಡುವುದೆಲ್ಲ ದೃಶ್ಯಕೋಟಿಗೆ ಸೇರುತ್ತದೆ. ನೋಡುವುದು ದೃಕ್, ಆತ್ಮವಸ್ತುವು ಇನ್ನೊಂದರಿಂದ ತಿಳಿಯಲ್ಪಡುವ ದೃಶ್ಯವಾಗಿರದೇ ಕೇವಲ ದೃಕ್ಕೇ ಆಗಿರುವುದು. ಅಂದರೆ ಸ್ವಯಂ ತಿಳಿಯುವುದು ಎಂದು ಉಪನಿಷತ್ತುಗಳು ಪ್ರತಿಪಾದಿಸುತ್ತವೆ.

**20. ತಸ್ಮಾತ್ತತ್ಕಾಲೇ ಸ್ವಾತಂತ್ರ್ಯಾರ್ಥಂ ಯೋಗಧರ್ಮಾನುಸೇವನಂ ಪರಿಸಂಖ್ಯಾನ–ಅಭ್ಯಾಸಶ್ಚ ವಿಶಿಷ್ಟಪುಣ್ಯೋಪಚಯಶ್ಚ ಶ್ರದ್ದಧಾನೈಃ ಪರಲೋಕಾದಿಭಿಃ ಅಪ್ರಮತ್ತೈಃ ಕರ್ತವ್ಯ ಇತಿ ಸರ್ವಶಾಸ್ತ್ರಾಣಾಂ ಯತ್ನತಃ ವಿಧೇಯೋಽರ್ಥಃ, ದುಶ್ಚರಿತಾತ್ ಚ ಉಪರಮಣಮ್ । ನ ಹಿ ತತ್ಕಾಲೇ ಶಕ್ಯತೇ ಕಿಂಚಿತ್ ಸಂಪಾದಯಿತುಮ್ । ಕರ್ಮಣಾ ನೀಯಮಾನಸ್ಯ ಸ್ವಾತಂತ್ರ್ಯಾಭಾವಾತ್ । [ಬೃ.ಉ.ಭಾ. 4.4.2]**

ಪ್ರಾಣೋತ್ಕ್ರಮಣಕಾಲದಲ್ಲಿ ಸ್ವತಂತ್ರನಾಗಿರುವುದಕ್ಕಾಗಿ ಯೋಗಧರ್ಮಗಳನ್ನು ಸೇವಿಸುವುದು, ಧ್ಯಾನಾಭ್ಯಾಸ, ವಿಶೇಷವಾದ ಪುಣ್ಯ ಸಂಪಾದನೆ ಇವುಗಳನ್ನು ಶ್ರದ್ಧಾವಂತರಾದ ಪರಲೋಕಾರ್ಥಿಗಳು ಪ್ರಮಾದರಹಿತರಾಗಿ ಮಾಡಬೇಕು. ಸರ್ವಶಾಸ್ತ್ರಗಳೂ ಪ್ರಯತ್ನಪೂರ್ವಕವಾಗಿ ಈ ಅರ್ಥವನ್ನು ವಿಧಿಸುತ್ತವೆ. ಕೆಟ್ಟ ನಡತೆಯನ್ನು ಬಿಡುವುದನ್ನು ವಿಧಿಸುತ್ತವೆ. ಉತ್ಕ್ರಾಂತಿ ಕಾಲದಲ್ಲಿ (ಮರಣಕಾಲದಲ್ಲಿ)ಏನನ್ನೂ ಸಂಪಾದಿಸುವುದಕ್ಕಾಗುವುದಿಲ್ಲ. ಏಕೆಂದರೆ ತಾನು ಮಾಡಿದ ಕರ್ಮವು ಅವನನ್ನು ಕೊಂಡೊಯ್ಯುತ್ತಿರುವುದರಿಂದ ಆಗ ಯಾವ ಸ್ವಾತಂತ್ರ್ಯವೂ ಇರುವುದಿಲ್ಲ.

**21. ಯದಾ ಈಶಾನಂ ದೇವಮ್ ಅಂಜಸಾ ಆತ್ಮತ್ವೇನ ಪಶ್ಯತಿ ನ ತದಾ ನಿಂದತಿ ವಾ ಕಂಚಿತ್ । ಸರ್ವಮ್ ಆತ್ಮಾನಂ ಹಿ ಪಶ್ಯತಿ । ಸ ಏವಂ ಪಶ್ಯನ್ ಕಮ್ ಅಸೌ ನಿಂದ್ಯಾತ್ । [ಬೃ.ಉ.ಭಾ. 4.4.15]**

ಈಶಾನನಾದ ದೇವನನ್ನು ತನ್ನ ಆತ್ಮನೆಂದು ಸ್ಪಷ್ಟವಾಗಿ ಯಾವಾಗ ತಿಳಿಯುತ್ತಾನೋ ಆಗ ಯಾರನ್ನೂ ನಿಂದಿಸುವುದಿಲ್ಲ. ಎಲ್ಲವೂ ಆತ್ಮನೆಂದಲ್ಲವೆ ಕಾಣುತ್ತಾನೆ. ಹೀಗಿರಲಾಗಿ ಇವನು ಯಾವನನ್ನು ನಿಂದಿಸಿಯಾನು?

ಮನುಷ್ಯನ ದ್ವೇಷ, ಅಸೂಯೆ, ಕ್ರೋಧ ಇವೆಲ್ಲವೂ ಇರುವುದು ತನಗಿಂತ ಬೇರೆಯಾದ ಇನ್ನೊಬ್ಬನ ಮೇಲೆಯೇ ಹೊರತು ತನ್ನ ಮೇಲಲ್ಲ. ಆತ್ಮವಸ್ತುವೊಂದನ್ನು ಬಿಟ್ಟು ಇಲ್ಲಿ ಬೇರೊಂದು ವಸ್ತುವೇ ಇಲ್ಲದಿರುವಾಗ ಆ ಇನ್ನೊಬ್ಬನೂ ತನಗಿಂತ ಬೇರೆಯಲ್ಲವೆಂದಾದ ಮೇಲೆ ಜ್ಞಾನಿಯು ಯಾರನ್ನೂ ನಿಂದಿಸಲಾರನು. ಯಾರ ಮೇಲೂ ಕೋಪಿಸಿಕೊಳ್ಳಲಾರನು.

**22. ನರತ್ವಂ ದೇವತ್ವಂ ನಗವನಮೃಗತ್ವಂ ಮಶಕತಾ**
**ಪಶುತ್ವಂ ಕೀಟತ್ವಂ ಭವತು ವಿಹಗತ್ವಾದಿಜನನಮ್ ।**
**ಸದಾ ತ್ವತ್ಪಾದಾಬ್ಜಸ್ಮರಣಪರಮಾನಂದಲಹರೀ–**
**ವಿಹಾರಾಸಕ್ತಂ ಚೇದ್ಹೃದಯಮಿಹ ಕಿಂ ತೇನ ವಪುಷಾ ॥**

[ಶಿವಾನಂದಲಹರೀ 10]

ಪಶು, ಪಕ್ಷಿ, ಮನುಷ್ಯ... ಮುಂತಾದ ಯಾವ ಜನ್ಮವಾದರೂ ಆಗಲಿ ನನ್ನ ಮನಸ್ಸು ಮಾತ್ರ ನಿನ್ನ ಪಾದಾರವಿಂದಗಳ ಸ್ಮರಣೆಯಿಂದುಂಟಾಗುವ ಆನಂದದ ಅಲೆಗಳಲ್ಲಿ ವಿಹರಿಸುತ್ತಿದ್ದರೆ ಯಾವ ಶರೀರ ಬಂದರೇನು?

ಭಗವಂತನ ಸ್ಮರಣೆಗೆ ಯಾವ ತರಹದ ದೇಹವಾದರೇನು? ಉತ್ತಮವಾದ ದೇಹ ಬಂದಾಗಲೂ ಭಗವಂತನ ಸ್ಮರಣೆ ಮಾಡದಿದ್ದರೆ ಅಂತಹ ದೇಹ ಬಂದಾದರೂ ಏನು ಪ್ರಯೋಜನ? ಆದ್ದರಿಂದ ಯಾವ ತರಹದ ದೇಹವೆಂಬುದು ಮುಖ್ಯವಲ್ಲ. ಭಗವಂತನ ಸ್ಮರಣೆ ಮಾಡುವುದಷ್ಟೇ ಮುಖ್ಯ. ಉದಾ: ಗಜೇಂದ್ರ, ವಿದುರ, ನೃಗೋಪಾಖ್ಯಾನದ ಕೃಕಲಾಸ (ಓತಿಕೇತ).

23. ಮಾರ್ಗಾವರ್ತಿತಪಾದುಕಾ ಪಶುಪತೇರಂಗಸ್ಯ ಕೂರ್ಚಾಯತೇ
ಗಂಡೂಷಾಂಬುನಿಷೇಚನಂ ಪುರರಿಪೋರ್ದಿವ್ಯಾಭಿಷೇಕಾಯತೇ ।
ಕಿಂಚಿದ್ಭಕ್ಷಿತಮಾಂಸಶೇಷಕಬಲಂ ನವ್ಯೋಪಹಾರಾಯತೇ
ಭಕ್ತಿಃ ಕಿಂ ನ ಕರೋತ್ಯಹೋ ವನಚರೋ ಭಕ್ತಾವತಂಸಾಯತೇ ॥
[ಶಿವಾನಂದಲಹರೀ 63] ।

ಭಕ್ತಿಯು ಏನನ್ನು ತಾನೆ ಮಾಡುವುದಿಲ್ಲ. ಬೇಡನೂ ಶ್ರೇಷ್ಠನಾದ ಭಕ್ತನಾಗುತ್ತಾನೆ.

ಬೇಡನೊಬ್ಬನು ಭಕ್ತಿಯ ಪರವಶತೆಯಲ್ಲಿ ತನ್ನ ಪಾದರಕ್ಷೆಗಳಿಂದಲೇ ಶಿವನ ಪಾಣಿಪೀಠವನ್ನು ಶುಚಿಗೊಳಿಸಿ ಗಂಡೂಷವನ್ನೇ ಶಿವನಮೇಲೆ ಉಗುಳಿ, ತಾನು ತಿಂದುಳಿದ ಮಾಂಸವನ್ನೇ ಶಿವನಿಗೆ ನೈವೇದ್ಯಮಾಡಿ ಭಕ್ತಶ್ರೇಷ್ಠನೆನಿಸಿಕೊಂಡದ್ದು ಪ್ರಸಿದ್ಧವಾಗಿದೆ. ಭಕ್ತಿಯಿಂದ ಸಮರ್ಪಿಸುವುದು ಮುಖ್ಯವೇ ಹೊರತು ಸಮರ್ಪಿಸುವ ವಸ್ತು ಮುಖ್ಯವಲ್ಲ. ಭಗವಂತನು ನೋಡುವುದು ನಮ್ಮ ಭಕ್ತಿಯನ್ನು ನಾವು ನೀಡುವ ವಸ್ತುವನ್ನಲ್ಲ.

24. ದೇವೇ ಚ ವೇದೇ ಚ ಗುರೌ ಚ ಮಂತ್ರೇ
ತೀರ್ಥೇ ಮಹಾತ್ಮನ್ಯಪಿ ಭೇಷಜೇ ಚ ।
ಶ್ರದ್ಧಾ ಭವತ್ಯಸ್ಯ ಯಥಾ ಯಥಾಂತ–
ಸ್ತಥಾ ತಥಾ ಸಿದ್ಧಿರುದೇತಿ ಪುಂಸಾಮ್ ॥

[ಸರ್ವವೇದಾಂತ ಸಿದ್ಧಾಂತ ಸಾರಸಂಗ್ರಹ 213]

ದೇವನಲ್ಲಿ ವೇದದಲ್ಲಿ ಗುರುವಿನಲ್ಲಿ ಮಂತ್ರದಲ್ಲಿ ತೀರ್ಥದಲ್ಲಿ ಮಹಾತ್ಮನಲ್ಲಿ ಹಾಗೂ ಔಷಧಿಯ ವಿಷಯದಲ್ಲಿ ಮನುಷ್ಯನಿಗೆ ತನ್ನ ಮನಸ್ಸಿನಲ್ಲಿ ಶ್ರದ್ಧೆ ಹೆಚ್ಚಾದಂತೆ ಫಲವೂ ನಿಖರವಾಗುತ್ತದೆ.

ಫಲದ ಮೂಲ ಪ್ರಯತ್ನ ಮತ್ತು ಶ್ರದ್ಧೆ. 'ಶ್ರದ್ಧಾಂ ಕಾಮಸ್ಯ ಮಾತರಂ' ಎಂದು ಶ್ರುತಿ. ಪವಿತ್ರ ವಸ್ತುಗಳಿಂದ ನಾವು ಫಲವನ್ನು ಪಡೆಯಬೇಕಾದಾಗ ನಮ್ಮ ಶ್ರದ್ಧೆಯೂ ಅಚಲವಾಗಿರಬೇಕಾಗುತ್ತದೆ. ಆಸ್ತಿಕ್ಯಬುದ್ಧಿಯೇ ಶ್ರದ್ಧೆ. ಆಸ್ತಿಕ್ಯಬುದ್ಧಿಯೆಂದರೆ ಕರ್ಮಫಲದಲ್ಲಿ ದೃಢವಿಶ್ವಾಸ.

25. ಪ್ರದೀಪಜ್ವಾಲಾಭಿರ್ದಿವಸಕರನೀರಾಜನವಿಧಿಃ
ಸುಧಾಸೂತೇಶ್ಚಂದ್ರೋಪಲಜಲಲವೈರರ್ಘ್ಯರಚನಾ ।
ಸ್ವಕೀಯೈರಂಭೋಭಿಃ ಸಲಿಲನಿಧಿಸೌಹಿತ್ಯಕರಣಂ
ತ್ವದೀಯಾಭಿರ್ವಾಗ್ಭಿಸ್ತವ ಜನನಿ ವಾಚಾಂ ಸ್ತುತಿರಿಯಮ್ । [ಸೌಂ.ಲ.]

ದೀಪದಿಂದ ಸೂರ್ಯನಿಗೆ ಆರತಿ ಎತ್ತಿದಂತೆ, ಚಂದ್ರ–ಕಾಂತಶಿಲೆಯ ನೀರಿನಿಂದ ಚಂದ್ರನಿಗೆ ಅರ್ಘ್ಯಕೊಟ್ಟಂತೆ, ಸಮುದ್ರದನೀರಿನಿಂದ ಸಮುದ್ರಕ್ಕೇ ತರ್ಪಣ ಕೊಟ್ಟಂತೆ ನಿನ್ನದೇ ಆದ ಮಾತುಗಳಿಂದ ನಿನ್ನ ಸ್ತೋತ್ರ ಮಾಡಿದ್ದಾಗಿದೆ.

ಹೇ ವಾಕ್‌ಪ್ರಪಂಚ ಜನನಿ! ನಿನ್ನದೇ ಆದ ಶಬ್ದಗಳಿಂದ ನಿನ್ನನ್ನು ಈ ರೀತಿಯಲ್ಲಿ ಸ್ತೋತ್ರಮಾಡಿದ್ದಾಯಿತು. ಅಂದರೆ ಶಬ್ದದ ಮೂಲವೂ ನೀನೇ ಆದ್ದರಿಂದ ನಿನ್ನಿಂದ ಪಡೆದ ಶಬ್ದಗಳಿಂದಲೇ ನಿನ್ನನ್ನು ಸ್ತುತಿಸಬೇಕಲ್ಲದೇ ಬೇರೆ ಮಾರ್ಗವಿಲ್ಲವಾಗಿದೆ. ಹೇ ಜಗನ್ಮಾತೆ! ನೀನೇ

ಶಬ್ದರೂಪದಿಂದ ಹರಿದುಬಂದು ನಿನ್ನನ್ನು ಸ್ತುತಿಸಿಕೊಳ್ಳುವುದಕ್ಕೆ ನನ್ನನ್ನು ಮಾಧ್ಯಮವನ್ನಾಗಿ ಮಾಡಿಕೊಂಡೆಯಲ್ಲ! ಇದು ನನ್ನ ಮೇಲೆ ನೀನು ಮಾಡಿದ ಅನುಗ್ರಹವಲ್ಲದೇ ಮತ್ತೇನು?

**26. ಸರ್ವೋ ಹಿ ಆತ್ಮಾಸ್ತಿತ್ವಂ ಪ್ರತ್ಯೇತಿ, ನ ನಾಹಮಸ್ಮಿ ಇತಿ । ಯದಿ ಹಿ ನ ಆತ್ಮಾಸ್ತಿತ್ವಪ್ರಸಿದ್ಧಿಃ ಸ್ಯಾತ್, ಸರ್ವೋ ಲೋಕಃ ನಾಹಮಸ್ಮೀತಿ ಪ್ರತೀಯಾತ್ । ಆತ್ಮಾ ಚ ಬ್ರಹ್ಮ । [ಸೂ.ಭಾ 1.1.2]**

ಎಲ್ಲರೂ ಆತ್ಮದ ಅಸ್ತಿತ್ವವನ್ನು ತಿಳಿದುಕೊಂಡಿದ್ದಾರೆ. ನಾನು ಇಲ್ಲ ಎಂದು ಯಾರೂ ತಿಳಿದಿಲ್ಲ. ಆತ್ಮವೇ ಬ್ರಹ್ಮ.

ಆತ್ಮವಸ್ತುವಿನ ಇರುವಿಕೆಯು ನಮಗೆ ಗೊತ್ತಿಲ್ಲವೆಂದುಕೊಂಡಿದ್ದರೂ ಗೊತ್ತಿರುತ್ತದೆ. ಇದ್ದಕ್ಕಿದ್ದ ಹಾಗೆ ವಿದ್ಯುದ್ದೀಪ ಆರಿಹೋಗಿ ಕತ್ತಲು ಕವಿದಾಗ ಈವರೆಗೆ ದೀಪದ ಬೆಳಕಿನಲ್ಲಿ ಕಾಣಿಸುತ್ತಿದ್ದ ವಸ್ತುಗಳು ನಮಗೆ ಕಾಣಿಸದೇ ಅರಿವಿಗೆ ಬರದೇ ಇರುತ್ತವೆ. ಆದರೆ ಆ ಕತ್ತಲಿನಲ್ಲಿಯೂ "ನಾನು ಇದ್ದೇನೆ" ಎಂಬ ಅರಿವು ಮಾತ್ರ ಇದ್ದೇ ಇರುತ್ತದೆ. ಹೀಗೆ ಆತ್ಮದ ಇರುವಿಕೆಯನ್ನು ನಾವು ಅಲ್ಲಗಳೆಯಲಾರೆವು.

**27. ನ ಚಾನ್ಯತ್ರ ಪರಮಾತ್ಮಜ್ಞಾನಾತ್ ಶೋಕವಿನಿವೃತ್ತಿರಸ್ತಿ । [ಸೂ.ಭಾ. 1.3.8]**

ಪರಮಾತ್ಮ ಜ್ಞಾನದ ಹೊರತಾಗಿ ದುಃಖದ ನಿವೃತ್ತಿ ಆಗುವುದಿಲ್ಲ.

ದುಃಖದ ಮೂಲ ರಾಗದ್ವೇಷಗಳು. ರಾಗದ್ವೇಷಗಳು ಅಡಗುವವರೆಗೂ ದುಃಖವು ಇದ್ದೇ ಇರುತ್ತದೆ. ಮನಸ್ಸು ಪ್ರಾಪಂಚಿಕವಾಗಿ ಯೋಚಿಸುವವರೆಗೂ ರಾಗ–ದ್ವೇಷಗಳೂ ಇದ್ದೇ ಇರುತ್ತವೆ. ಯಾವಾಗ ಮನಸ್ಸು ಪರಮಾತ್ಮಪರವಾಗಿ ಯೋಚಿಸುತ್ತಾ ಸ್ವಸ್ವರೂಪದಲ್ಲಿ (ಲೀನವಾಗುವುದೋ) ನಿಲ್ಲುವುದೋ ಆಗ ದುಃಖದ ಲೇಶವೂ ಇರಲಾರದು.

**28. ಇಂದ್ರಿಯಾಣಾಂ ಹಿ ವಿಷಯಸೇವಾತೃಷ್ಣಾತಃ ನಿವೃತ್ತಿಃ ಯಾ ತತ್ಸುಖಂ, ನ ವಿಷಯವಿಷಯಾ ತೃಷ್ಣಾ–ದುಃಖಮೇವ ಹಿ ಸಾ ।**

**[ಗೀ.ಭಾ. 2.66]**

ಇಂದ್ರಿಯಗಳು ವಿಷಯಗಳನ್ನು ಅಪೇಕ್ಷಿಸದಿರುವುದೇ ಸುಖವು ಹೊರತು ವಿಷಯಗಳ ಅಪೇಕ್ಷೆ ಸುಖವಲ್ಲ ದುಃಖವೇ. ಆಸೆ ಇದ್ದಾಗ ಕಿಂಚಿತ್ತೂ ಸುಖವಿರುವುದಿಲ್ಲ.

ತೃಪ್ತಿಯ ಮೂಲವು ಅಲಂ ಭಾವದಲ್ಲಿದೆ (ಸಾಕು ಎಂಬುದು). ಅತೃಪ್ತಿಯ ಮೂಲವು ಬೇಕು ಎಂಬುದು. ಎಲ್ಲಿಯವರೆಗೆ ಮನುಷ್ಯನು ಇಂದ್ರಿಯಗಳು ಕೇಳಿದ್ದನ್ನು ಕೊಡುತ್ತಾ ಇರುತ್ತಾನೋ ಅಲ್ಲಿಯವರೆಗೂ ಒಂದಾದ ಮೇಲೊಂದು ಅಪೇಕ್ಷೆಯು ಅವನನ್ನು ಕಾಡುತ್ತಲೇ ಇರುತ್ತದೆ. ಇಂದ್ರಿಯಗಳು ಅಪೇಕ್ಷಿಸಿದ್ದು ಸಿಕ್ಕಾಗ ಆಗುವ ಸುಖವು ಕ್ಷಣಿಕ. ಇಂದ್ರಿಯಗಳು ಅಪೇಕ್ಷಿಸುವುದನ್ನೇ ಬಿಟ್ಟಾಗ ಸಿಗುವ ಸುಖವು ಸಹಜ ಸುಖವಾಗುವುದು. **ನ ಜಾತು ಕಾಮಃ ಕಾಮಾನಾಮ್ ಉಪಭೋಗೇನ ಶಾಮ್ಯತಿ.**

**29. ನ ಹಿ ಅನುತ್ಸಾಹವತಾಮ್ ಅನನುತಿಷ್ಠತಾಮ್ ಅಲಸಾನಾಂ ಭೋಗಪ್ರಾಪ್ತಿಃ ಲೋಕೇ ದೃಷ್ಟಾ [ಛಾಂ.ಉ.ಭಾ. 3.6.2]**

ಉತ್ಸಾಹರಹಿತರಾಗಿ, ಉದ್ಯೋಗವನ್ನು ಮಾಡದಿರುವ ಸೋಮಾರಿಗಳಿಗೆ ಭೋಗಪ್ರಾಪ್ತಿಯು ಲೋಕದಲ್ಲಿ ಕಂಡುಬರುವುದಿಲ್ಲ.

ಜೀವನದಲ್ಲಿ ಏನೇ ಸಮಸ್ಯೆ ಬಂದರೂ ಎಡರುತೊಡರು–ಗಳುಂಟಾದರೂ ಧೃತಿಗೆಡದೆ ಉತ್ಸಾಹದಿಂದ ತಮ್ಮ ಉದ್ಯೋಗವನ್ನು ಮಾಡುವವರಿಗೆ ಫಲವು ಸಿಗುವುದು. ಆದ್ದರಿಂದ ಉತ್ಸಾಹರಹಿತರಾಗಿ ಸೋಮಾರಿಗಳಾಗಿ ಆಯುಸ್ಸನ್ನು ವ್ಯರ್ಥಮಾಡಬಾರದು. ಸುಭಾಷಿತವು ಕೂಡ **'ಉದ್ಯಮೇನೈವ ಸಿಧ್ಯಂತಿ ಕಾರ್ಯಾಣಿ ನ ಮನೋರಥೈಃ'** ಎಂದು ನಮ್ಮನ್ನು ಎಚ್ಚರಿಸುತ್ತದೆ.

30. ವಾಗ್ವೈಖರೀ ಶಬ್ದಝರೀ ಶಾಸ್ತ್ರವ್ಯಾಖ್ಯಾನ ಕೌಶಲಮ್ ।
ವೈದುಷ್ಯಂ ವಿದುಷಾಂ ತದ್ವತ್ ಭುಕ್ತಯೇ ನ ತು ಮುಕ್ತಯೇ ॥
[ವಿ.ಚೂ. 60]

ಪಂಡಿತರ ವಾಗ್ವೈಖರಿ, ಶಬ್ದಗಳ ಪ್ರಭಾವ, ಶಾಸ್ತ್ರಕೌಶಲ, ಇವೆಲ್ಲವೂ ಭೋಗಕ್ಕೆ ಸಾಧನವಾಗಬಲ್ಲವೇ ಹೊರತು ಮುಕ್ತಿಗಲ್ಲ.

ಕ್ಲಿಷ್ಟವಾದ ಅರ್ಥವನ್ನು ಸುಲಭ ಪದಗಳಿಂದ ವಿವರಿಸುವುದು, ನಿರರ್ಗಲವಾಗಿ ಅರಳು ಹುರಿದಂತೆ ಮಾತನಾಡುವುದು, ಶಾಸ್ತ್ರವನ್ನು ವ್ಯಾಖ್ಯಾನ ಮಾಡುವುದು, ಇವೆಲ್ಲವೂ ಪ್ರತಿಭೆಯನ್ನು ತೋರಿಸಿ ಭುಕ್ತಿಗೆ(ಧನಾರ್ಜನೆಗೆ) ಕಾರಣವಾಗಬಲ್ಲವೇ ಹೊರತು ಮುಕ್ತಿಗಲ್ಲ. ಮುಕ್ತಿಗೆ ಬೇಕಾದುದು ಆತ್ಮಜ್ಞಾನ ಮಾತ್ರ. ಕೇವಲ ಲೌಕಿಕ ಪಾಂಡಿತ್ಯದಿಂದ ಪಂಡಿತನೆನಿಸಿಕೊಳ್ಳಬಹುದು; ಮುಕ್ತನೆನಿಸಲಾರ.

31. ಜಲಂ ಪಂಕವದಸ್ಪಷ್ಟಂ ಪಂಕಾಪಾಯೇ ಜಲಂ ಸ್ಫುಟಮ್ ।
ಯಥಾ ಭಾತಿ ತಥಾತ್ಮಾಪಿ ದೋಷಾಭಾವೇ ಸ್ಫುಟಪ್ರಭಃ ॥ [ವಿ.ಚೂ. 206]

ಅತ್ಯಂತ ಕೆಸರಾಗಿರುವ ನೀರು ಕೆಸರು ಹೋದಮೇಲೆ ಸ್ವಚ್ಛವಾಗಿ ತೋರುವಂತೆ ಆತ್ಮನು ದೋಷವಿಲ್ಲದಾಗ ಸ್ಫುಟವಾಗಿ ಪ್ರಕಾಶಿಸುತ್ತಾನೆ.

ಕೊಳೆಯಿಂದ ಕೂಡಿದ ನೀರು ಅಸ್ಪಷ್ಟವಾಗಿ ತೋರುತ್ತದೆ ಅದೇ ಕೊಳೆಯನ್ನು ಬೇರ್ಪಡಿಸಿದಾಗ ನೀರು ಸ್ವಚ್ಛವಾಗಿ ತೋರುತ್ತದೆ. ಹಾಗೆಯೇ ಅಭಿಮಾನ, ಅಹಂಕಾರಗಳೆಂಬ ಅಜ್ಞಾನದ ಕೊಳೆ ತೊಲಗಿದಾಗ ಆತ್ಮತತ್ತ್ವ ಸ್ಫುಟವಾಗಿ ಪ್ರಕಾಶಿಸುತ್ತದೆ.

32. ತಸ್ಮಾತ್ಕುತಾರ್ಕಿಕ ಭೇದದೃಷ್ಟಿಂ ನಾಸ್ತಿಕಕುದೃಷ್ಟಿಂ ಚ ಉಜ್ಝಿತ್ವಾ ಮಾತಾಪಿತೃಸಹಸ್ರೇಭ್ಯೋಽಪಿ ಹಿತೈಷಿಣಾ ವೇದೇ ನ ಉಪದಿಷ್ಟಮ್ ಆತ್ಮೈಕತ್ವದರ್ಶನಂ ಶಾಂತ-ದರ್ಪೈಃ ಆದರಣೀಯಮಿತ್ಯರ್ಥಃ ।
[ಕ.ಉ.ಭಾ. 2.15]

ಕುಯುಕ್ತಿಯ ಭೇದದೃಷ್ಟಿಯನ್ನು ಹಾಗೂ ನಾಸ್ತಿಕ- ಬುದ್ಧಿಯನ್ನು ಬಿಟ್ಟು ಸಾವಿರಾರು ತಾಯಿತಂದೆಗಳಿಗಿಂತಲೂ ಹಿತೈಷಿಯಾದ ವೇದವು ಉಪದೇಶಿಸಿದ ಆತ್ಮೈಕತ್ವಜ್ಞಾನವನ್ನು ದರ್ಪಾದಿಗಳನ್ನು ಬಿಟ್ಟು ಆದರಿಸಬೇಕು.

ಅತ್ಯಂತ ಹಿತೈಷಿಗಳಾದ ತಂದೆ ತಾಯಿಯರೂ ಮನುಷ್ಯಸಹಜವಾದ ರಾಗದ್ವೇಷಗಳಿಗೆ ಒಳಗಾಗಿ ನಮ್ಮ ಹಿತವನ್ನು ನಿರ್ಧರಿಸುವಲ್ಲಿ ವಿಫಲರಾಗಬಹುದು. ಇಂದು ಸರಿಯೆನಿಸಿದ ನಿರ್ಧಾರವೇ ಮುಂದೊಂದು ದಿನ ಅನರ್ಥಕ್ಕೆ ಕಾರಣವೂ ಆಗಬಹುದು. ಆದರೆ ಅಪೌರುಷೇಯವಾದ ವೇದವಾಣಿಗೆ ರಾಗದ್ವೇಷಗಳ ಸೋಂಕೇ ಇಲ್ಲವಾದ್ದರಿಂದ ಅದು ಸದಾ ನಮ್ಮ ಆತ್ಯಂತಿಕ ಹಿತವನ್ನೇ ಬಯಸುತ್ತದೆ. ಆದ್ದರಿಂದ ವೇದ ಹೇಳಿದ್ದನ್ನು ನಾವು ಆದರಿಸಬೇಕು.

******